# ಮಾಹಿತಿ ಹಕ್ಕು ಕಾಯ್ದೆ 2005ರ ಅಡಿಯಲ್ಲಿ ಪಾಲಿಕೆಯಲ್ಲಿ ಅರಣ್ಯ ಘಟಕಕ್ಕೆ ಸಂಬಂಧಿಸಿದಂತೆ ಅನುಸರಿಸುವ ಕ್ರಮಗಳು ( Standard Procedure)

1. **ವಿಭಾಗ ಕಛೇರಿ–** ಪಾಲಿಕೆಯ ಅರಣ್ಯ ಘಟಕದಲ್ಲಿ ಉಪ ವಿಭಾಗ ಕಛೇರಿ–1 ಉಪ ವಿಭಾಗ ಕಛೇರಿ–2 ಒಳಗೊಂಡಿರುತ್ತದೆ. ಮುಂದುವರಿದು ವಲಯ ಕಛೇರಿಗಳಾದ ಪೂರ್ವ, ಪಶ್ಚಿಮ, ದಕ್ಷಿಣ, ದಾಸರಹಳ್ಳಿ, ಮಹದೇವಪುರ, ಯಲಹಂಕ, ಬೊಮ್ಮನಹಳ್ಳಿ ರಾಜರಾಜೇಶ್ವರಿನಗರಗಳನ್ನು ಒಳಗೊಂಡಿರುತ್ತದೆ.

ಪ್ರತಿವರ್ಷ ನಿರ್ವಹಿಸಬೇಕಾದ ಈ ಕೆಳಗಿನ ಅರಣ್ಯಕಾಮಗಾರಿಳ ನಿರ್ವಹಣೆಗೆ ಸಂಬಂಧಪಟ್ಟಂತೆ ಅಗತ್ಯ ಅನುದಾನವನ್ನು ಕೋರುವ ಪ್ರಕ್ರಿಯೆನ್ನು ವಿಭಾಗ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ, ರಸ್ತೆ ಬದಿಗಳಲ್ಲಿ ಮತ್ತು ಖಾಲಿ ಸ್ಥಳಗಳಲ್ಲಿ ನೆಡುತೋಪು ಬೆಳೆಸುವ ಮತ್ತು ನಿರ್ವಹಿಸುವ ಕಾಮಗಾರಿಯನ್ನು ಕೈಗೊಳ್ಳುವುದು.
2. ನೆಡುತೋಪು ಬೆಳೆಸಲು ಅಗತ್ಯವಿರುವ ವಿವಿಧ ಜಾತಿಯ ಸಸಿಗಳನ್ನು ಬೆಳೆಸಲು ಪೂರಕ ಕ್ರಮ ತೆಗೆದುಕೊಳ್ಳುವುದು.
3. ಮರಗಳ ವ್ಯವಸ್ಥಿತ ನಿರ್ವಹಣೆಗೆ ನಿಯಮಾನುಸಾರ ಮತ್ತು ಪಾರದರ್ಶಕ ನಿಯಮ ವ್ಯಾಪ್ತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದು.
4. ಹಿಂದಿನ ಸಾಲುಗಳಲ್ಲಿ ಬೆಳೆಸಿದ ನೆಡುತೋಪುಗಳನ್ನು ನಿರ್ವಹಿಸುವ ಸಂಬಂಧ ಪೂರಕ ಕ್ರಮಗಳನ್ನು ತೆಗೆದುಕೊಳ್ಳುವುದು.

ಈ ಅರಣ್ಯೀಕರಣ ಕಾಮಾಗಾರಿಗೆ ಪ್ರತೀ ಆರ್ಥಿಕ ವರ್ಷಕ್ಕೆ ಅಂದಾಜು ಆಯವ್ಯಯವನ್ನು ಪಾಲಿಕೆಗೆ ಸಲ್ಲಿಸಿ ಅನುದಾನ ಪಡೆಯುವ ಕ್ರಮ ತೆಗೆದುಕೊಳ್ಳುವುದು.

ಅನುದಾನ ನಿಗಧಿಯಾದ ನಂತರ ಪ್ರತೀ ವಲಯಕ್ಕೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಕ್ರಿಯಾಯೋಜನೆಯನ್ನು ತಯಾರಿಸಿ ಪಾಲಿಕೆಯ ಮಂಜೂರಾತಿ ಪಡೆಯುವುದು. ಪ್ರತೀ ಕಾಮಗಾರಿಗೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ವಲಯ ಮಟ್ಟದಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮೂಲಕ ಪಡೆದು ವಿಭಾಗಾಧಿಕಾರಿಗಳಿಗೆ ಆರ್ಥಿಕ ಪ್ರಾಧಿಕಾರಕ್ಕೆ ಅನುಗುಣವಾಗಿ ಮಂಜೂರು ಮಾಡುವುದು ಮತ್ತು ವಿಭಾಗ ಮಟ್ಟದ ಪ್ರಾಧಿಕಾರ ಹೆಚ್ಚಿದಲ್ಲಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ಮಂಜೂರಾತಿ ಪಡೆಯುವುದು

ಕ್ರಿಯಾಯೋಜನೆಯಲ್ಲಿ ಅಳವಡಿಸಿರುವ ಕಾಮಗಾರಿಗೆ ಪೂರಕವಾಗಿ ಕರ್ನಾಟಕ ಪಾರದರ್ಶಕ ಕಾಯ್ದೆ 1999ಮತ್ತು ನಿಯಮ 2000 ರೀತ್ಯಾ ಇ–ಟೆಂಡರ್/ಇ–ಪ್ರೊಕ್ಯೂರ್‌ಮೆಂಟ್ ರ ವ್ಯಾಪ್ತಿಯಲ್ಲಿ ನಡೆಸುವುದು.

ಇ–ಟೆಂಡರ್ ಪ್ರಕ್ರಿಯೆಯ ವಿವರಗಳನ್ನು ಟೆಂಡರ್ ಪ್ರಾಧಿಕಾರದಲ್ಲಿ ಚರ್ಚಿಸಿ ಪ್ರಾಧಿಕಾರದ ಅನುಮೋದನೆಯ ನಂತರ ಯಶಸ್ವಿ ಟೆಂಡರ್‌ದಾರರ ಪರವಾಗಿ ಮಂಜೂರಾತಿ ನೀಡಲು ಪಾಲಿಕೆಯಲ್ಲಿನ ಉನ್ನತ ಮಟ್ಟಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು, ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಕ್ರಮ ಪ್ರಾಧಿಕಾರದಿಂದ ಆನ್‌ಲೇನ್ ಮೂಲಕ ಅನುಮೋದನೆ ಪಡೆದು ಯಶಸ್ವಿ ಟೆಂಡರ್‌ದಾರರಿಗೆ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಸಸಿಗಳನ್ನು ಬೆಳೆಸುವುದು, ಹಳೆ ನೆಡುತೋಪು ನಿರ್ವಹಣೆ, ಬಾಕಿ ಉಳಿದಿರುವ ಸಸಿಗಳ ನಿರ್ವಹಣೆ, ಮರಗಳ ವ್ಯವಸ್ಥಿತ ನಿರ್ವಹಣೆ ಈ ಕಾಮಗಾರಿಗಳಿಗೆ ಟೆಂಡರ್ ನಿಯಮಗಳ ವ್ಯಾಪ್ತಿಯಲ್ಲಿ ಕರಾರು ಪಡೆದು ಕಾರ್ಯಾದೇಶ ನೀಡುವುದು.

ವಿಭಾಗ ಮಟ್ಟದ ಸಿಬ್ಬಂದಿಯ ವೇತನ ಬಿಲ್ಲು ತಯಾರಿಸಿ ಲೆಕ್ಕ ಶಾಖೆಗೆ ಸಲ್ಲಿಸುವುದು ಮತ್ತು ಸಿಬ್ಬಂದಿಯ ಕಾರ್ಯನಿರ್ವಹಣೆಯ ಬಗ್ಗೆ ಆಡಳಿತಾತ್ಮಕವಾಗಿ ಕ್ರಮ ತೆಗೆದುಕೊಳ್ಳುವುದು ಮತ್ತು ಸಿಬ್ಬಂದಿಯ ಸೇವಾ ವಿವರಗಳ ಬಗ್ಗೆ ಪಾಲಿಕೆಯ ಸಕ್ರಮ ಪ್ರಾಧಿಕಾರಕ್ಕೆ ಪ್ರಸ್ಥಾವನೆಗಳನ್ನು ಸಲ್ಲಿಸುವುದು.

**ವಿಭಾಗ ಮಟ್ಟದ ಅಧಿಕಾರಿಗಳು** ಕರ್ನಾಟಕ ಮಾಹಿತಿ ಕಾಯ್ದೆ–2005ರಡಿ ಮೇಲ್ಮನವಿ ಅಧಿಕಾರಿಯಾಗಿರುತ್ತಾರೆ.

2. **ಉಪ ವಿಭಾಗಳು–** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅರಣ್ಯ ಘಟಕ್ಕೆ ಸಂಬಂಧಿಸಿದಂತೆ

ಈ ಕೆಳಗಿನಂತೆ 2 ಉಪ ವಿಭಾಗಗಳಿರುತ್ತವೆ.

1. **ಉಪ ವಿಭಾಗ–1–** ಈ ಉಪ ವಿಭಾಗದ ವ್ಯಾಪ್ತಿಗೆ ಪೂರ್ವ, ದಾಸರಹಳ್ಳಿ, ಯಲಹಂಕ, ಮಹದೇವಪುರ ವಲಯಗಳು ಒಳಪಡುತ್ತದೆ.
2. **ಉಪವಿಭಾಗ–2** –ಈ ಉಪ ವಿಭಾಗದ ವ್ಯಾಪ್ತಿಗೆ ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ರಾಜರಾಜೇಶ್ವರಿನಗರ ವಲಯಗಳು ಒಳಪಡುತ್ತದೆ.

ಉಪ ವಿಭಾಗಾಧಿಕಾರಿಗಳು ಕರ್ನಾಟಕ ವೃಕ್ಷಸಂರಕ್ಷಣಾ ಕಾಯ್ದೆ –1976ರಡಿ ವೃಕ್ಷಾಧಿಕಾರಿಗಳಾಗಿರುತ್ತಾರೆ ಉಪ ವಿಭಾಗದ ವ್ಯಾಪ್ತಿಗೆ ಬರುವ ವಲಯಗಳಲ್ಲಿ ಸಾರ್ವಜನಿಕ ಕೋರಿಕೆಯ ಮೇರೆಗೆ, ಅಭಿವೃದ್ಧಿಕಾರ್ಯಗಳಿಗೆ ಮತ್ತು ಶಿಥಿಲವಾಗಿರುವ ಮತ್ತು ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ತೆರವುಗೊಳಿಸುವ ಪ್ರಸ್ತಾವನೆಗಳನ್ನು ನಿಯಮದಡಿ ಪರಿಶೀಲಿಸಿ ಆದೇಶ ನೀಡುವುದು.

ಉಪ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಿಸಲ್ಪಡುವ ಅರಣ್ಯೀಕರಣ ಕಾಮಗಾರಿಗಳು ಅಂದರೆ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಸಸಿಗಳನ್ನು ಬೆಳೆಸುವುದು, ಹಳೆ ನೆಡುತೋಪು ನಿರ್ವಹಣೆ, ಬಾಕಿ ಉಳಿದಿರುವ ಸಸಿಗಳ ನಿರ್ವಹಣೆ, ಮರಗಳ ವ್ಯವಸ್ಥಿತ ನಿರ್ವಹಣೆ ಸಂಬಂಧ ಉಸ್ತುವಾರಿ ಮತ್ತು ಮಾರ್ಗದರ್ಶನ ನೀಡುವ ಕೆಲಸ ಉಪ ವಿಭಾಗದ ಮಟ್ಟದಲ್ಲಿ ನಡೆಯುತ್ತದೆ ಮತ್ತು ಉಪ ವಿಭಾಗಾಧಿಕಾರಿಗಳು ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿ ದೃಢೀಕರಿಸುವ ತಪಸೀಲು ಅಧಿಕಾರಿಯಾಗಿರುತ್ತಾರೆ.

**ಮಾಹಿತಿ ಹಕ್ಕು ಕಾಯ್ದೆ–2005ರಡಿ ಉಪ ವಿಭಾಗ ಅಧಿಕಾರಿ –1 ಮತ್ತು 2 ಇವರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ**

3. **ವಲಯ ಕಛೇರಿ–** ವಲಯ ಮಟ್ಟದಲ್ಲಿ ಅರಣ್ಯೀಕರಣ ಕಾಮಗಾರಿಗಳು ಅಂದರೆ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಸಸಿಗಳನ್ನು ಬೆಳೆಸುವುದು, ಹಳೆ ನೆಡುತೋಪು ನಿರ್ವಹಣೆ, ಬಾಕಿ ಉಳಿದಿರುವ ಸಸಿಗಳ ನಿರ್ವಹಣೆ, ಮರಗಳ ವ್ಯವಸ್ಥಿತ ನಿರ್ವಹಣೆ ಕೆಲಸಗಳಿಗೆ ಸಂಬಂಧ ಪಟ್ಟ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮೂಲಕ ಮಂಜೂರಾತಿಗೆ ಸಲ್ಲಿಸುವುದು. ಯಶಸ್ವಿ ಟೆಂಡರ್‌ದಾರರಿಗೆ ನೀಡಿರುವ ಕಾರ್ಯಾದೇಶದಂತೆ ಈ ಕೆಲಸಗಳನ್ನು ಮೇಲುಸ್ತುವಾರಿ ಮಾಡುವುದು, ನಿಗಧಿತ ಭೌತಿಕ ಗುರಿ ಮತ್ತು ಗುಣಮಟ್ಟದ ಕೆಲಸಗಳನ್ನು ಸಾಧಿಸುವತ್ತ ತಾಂತ್ರಿಕ ಮಾರ್ಗದರ್ಶನ ನೀಡುವುದು ಎಲ್ಲಾ ಕೆಲಸಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳೊಡನ್ನು ನಿರ್ವಹಿಸವುದು, ಕಾಮಗಾರಿಯ ನಿರ್ವಹಣೆಯಲ್ಲಿ ಬರುವ ಅಹವಾಲುಗಳಿಗೆ ಸ್ಪಂದಿಸಿ ತಾಂತ್ರಿಕ ಮಾಹಿತಿ ನೀಡಿ ಗುಣ ಮಟ್ಟದ ಕೆಲಸಗಳನ್ನು ನಿರ್ವಹಿಸುತ್ತಾರೆ

3..

4. **ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಅರಣ್ಯ ರಕ್ಷಕರು–** ಉಪ ವಲಯ ಅರಣ್ಯಾಧಿಕಾರಿ ಮತ್ತು ಅರಣ್ಯ ರಕ್ಷಕರು ಪ್ರತಿ ವಲಯದಲ್ಲಿ ಬರುವ ವಾರ್ಡ್‌ಗಳಲ್ಲಿನ ಅರಣ್ಯೀಕರಣ ಕಾಮಗಾರಿಗಳು ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಸಸಿಗಳನ್ನು ಬೆಳೆಸುವುದು, ಹಳೆ ನೆಡುತೋಪು ನಿರ್ವಹಣೆ, ಬಾಕಿ ಉಳಿದಿರುವ ಸಸಿಗಳ ನಿರ್ವಹಣೆ, ಮರಗಳ ವ್ಯವಸ್ಥಿತ ನಿರ್ವಹಣೆಗೆ ತಾಂತ್ರಿಕ ಸಹಕಾರ ನೀಡುವುದು ಉಸ್ತುವಾರಿ ಮಾಡುವುದು ಮುಂತಾದ ಕೆಲಸಗಳನ್ನು ನಿರ್ವಹಿಸಬೇಕಾಗಿರುತ್ತದೆ. ಮೇಲಾಧಿಕಾರಿಗಳಿಂದ ರವಾನಿಸಲ್ಪಟ್ಟ ಸಾರ್ವಜನಿಕ ಅವಹಾಲುಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಮಾಡಿ ವಲಯ ಕಛೇರಿಗಳಿಗೆ ವರದಿಯನ್ನು ಸಲ್ಲಿಸುವುದು ಮತ್ತು ನಿರ್ದಿಷ್ಟ ಆದೇಶಗಳಂತೆ ನಿರ್ವಹಿಸುವ ಕೆಲಸಗಳಿಗೆ ಉಸ್ತುವಾರಿ ಮಾಡುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು